Replies to sub-question (d) of Un-starred Qn. No: 245 indicating the details of taluk-wise tricolour card/green cards in Bidar Dt.

Name of Taluk	No. of green card originally existed	No.of tricolour card replaced with greencard	Additional tricolour cards issued
Aurad	17,947	35,209	17,262
Bhalki	17,266	33,895	16,629
Basavakalyana	18,786	36,114	17,328
Humnabad	15,951	42,580	26,629
Bidar	16,611	34,178	17,567
Total	86,561	1,81,976	95,415

ವಿಷಯ : ದೂರವಾಣಿ ಕದ್ದಾಲಿಕೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 451 (244)

ಶ್ರೀ. ಬಸವರಾಜ್ ಪಾಟೀಲ್ ಆಟ್ಟೂರ್ (ಬಸವಕಲ್ಯಾಣ) :- ಮಾನ್ಯ ಗೃಹ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೋಲೀಸ್ ಇಲಾಖೆಯ ಗಣ್ಯವ್ಯಕ್ತಿಗಳ, ಕೆಲವು ಮಂತ್ರಿಗಳ ಮತ್ತು ಪ್ರಮುಖ ವ್ಯಕ್ತಿಗಳ ದೂರವಾಣಿ ಕದ್ದಾಲಿಕೆ ಮಾಡುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಸಿ.ಬಿ. ಐ. ಗೆ : ವಹಿಸಲು ಕ್ರಮ ತೆಗೆದುಕೊಂಡಿದೆಯೇ ?

ಇ) ಸರ್ಕಾರವು ಅಂಚೆ ಮತ್ತು ಟೆಲಿಫೋನ್ ಇಲಾಖೆಗೆ ಪತ್ರ ಬರೆದು ಮುಖ್ಯ ವ್ಯಕ್ತಿಗಳ ದೂರವಾಣಿ ಕದ್ದಾಲಿಸಲು ಸೂಚಿಸಿದೆಯೆ ?

ಶ್ರೀ. ಬೌಡರೆಡ್ಡಿ (ಗೃಹ ಸಚಿವರು) :-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ವಿಷಯ : ಬಸವ ಕಲ್ಯಾಣದಿಂದ ಪವಿತ್ರ ಸ್ಥಳಗಳಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಓಡಾಡಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 452 (243)

ಶ್ರೀ. ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣದಿಂದ ಇತರೆ ಯಾತ್ರಾ ಸ್ಥಳಗಳಾದ ಶ್ರೀ.ಶೈಲ, ಉಡುಪಿ, ತುಳಜಾಪುರ ತಿರುಪತಿ, ಧರ್ಮಸ್ಥಳ, ಮುಂಬಯಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಓಡಿಸುವ ಬಗ್ಗೆ ಪ್ರಸ್ತಾವನೆಗಳಿರುತ್ತವೆಯೇ

ಆ) ಹಾಗಿಲ್ಲದಿದ್ದಲ್ಲಿ ಬಸವ ಕಲ್ಯಾಣದಿಂದ ಮೇಲಿನ ಸ್ಥಳಗಳಿಗೆ ಬಸ್ಸುಗಳನ್ನು ತರಿಸಲು ಸರ್ಕಾರಿ ಕ್ರಮ ತೆಗೆದುಕೊಳ್ಳುವುದೇ.

ಇ) ಮೇಲಿನ ಸ್ಥಳಗಳಿಗೆ ವಾಹನ ಸೌಕರ್ಯ ಕಲ್ಪಿಸಬೇಕೆಂದು ಬಸವ ಕಲ್ಯಾಣದ ಜನತೆ ಕೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ. ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :-

ಅ) ಇಲ್ಲ

ಆ) ಇಲ್ಲ . ಆದರೆ ಧರ್ಮಸ್ಥಳ ಮತ್ತು ಉಡುಪಿಗಳನ್ನು ಹೊರತು ಪಡಿಸಿ ಈ ಮಾರ್ಗಗಳನ್ನು ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರಗಳೊಂದಿಗೆ ಮುಂದಿನ ಅಂತರ ರಾಜ್ಯ ಒಪ್ಪಂದದಲ್ಲಿ ಸೇರಿಸುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಹೌದು.

ವಿಷಯ : ಬಸವ ಕಲ್ಯಾಣದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 453 (242)

ಶ್ರೀ. ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) :- ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಸವಕಲ್ಯಾಣದಲ್ಲಿ 1994-95ನೇ ಸಾಲಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ ಕೈಗೊಂಡಿದೆಯೇ ?